ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

ESTD - 1964

ಭಾರತ ಸರ್ಕಾರದ ಡಿಬಿಟಿಯಿಂದ "ಸ್ಟಾರ್ ಕಾಲೇಜ್ ಸ್ಕೀಮ್" ಅಡಿಯಲ್ಲಿ ಗುರುತಿಸಲ್ಪಟ್ಟಿದೆ

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

ಊಟಿರಸ್ತೆ, ಮೈಸೂರು-೫೭೦ ೦೨೫

☎ 0821-2548236 & 2548380 Fax: 0821-2548238 E-mail: jssautonomous@gmail.com

ದಿನಾಂಕ : 30-03-2015

## ಪ್ರಕಟಣೆಯ ಕೃಪೆಗಾಗಿ

*ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸಮುಚ್ಚಯ, ಊಟಿ ರಸ್ತೆ, ಮೈಸೂರು*

# ಯುಜಿಸಿ ಪ್ರಾಯೋಜಿತ ಅಭಿಶಿಕ್ಷಣ ಕಾರ್ಯಕ್ರಮ ಉದ್ಘಾಟನೆ

ಮೈಸೂರು, ದಿ. 30 – ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸಮುಚ್ಚಯ, ಊಟಿ ರಸ್ತೆಯಲ್ಲಿನ ಕಾಲೇಜು ಉಪನ್ಯಾಸಕರಿಗಾಗಿ ಏರ್ಪಡಿಸಿದ್ದ "21ನೇ ಶತಮಾನದ ವಿದ್ಯಾರ್ಥಿಗಳಿಗೆ ಬೋಧನೆ ಮತ್ತು ಕಲಿಕೆಯ ಕೇಂದ್ರೀಯ ವಿಧಾನ" ಎಂಬ ವಿಷಯದ ಬಗ್ಗೆ ಒಂದು ದಿನದ ಯುಜಿಸಿ ಪ್ರಾಯೋಜಿತ ಅಭಿಶಿಕ್ಷಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಸಮಾರಂಭದ ಉದ್ಘಾಟನೆಯನ್ನು ಬೆಂಗಳೂರಿನ ಬಂಜಾರಾ ಅಕಾಡೆಮಿಯ ಸಂಸ್ಥಾಪಕರಾದ ಡಾ. ಆಲಿಕವಾಜರವರು ನೆರವೇರಿಸಿದರು. ಉದ್ಘಾಟನಾ ಭಾಷಣದಲ್ಲಿ ಕಾಲೇಜಿನ ಎಲ್ಲಾ ಉಪನ್ಯಾಸಕ ವರ್ಗದವರನ್ನುದ್ದೇಶಿಸಿ ಮಾತನಾಡುತ್ತಾ, ನಮ್ಮ ಪುರಾತನ ಗುರುಕುಲ ಮಾದರಿಯ ಬೋಧನಾ ವ್ಯವಸ್ಥೆಯೇ ಉತ್ತಮವಾದದ್ದು. ಬ್ರಿಟಿಷರು ನೀಡಿದಂತಹ ಮೆಕಾಲೆ ಬೋಧನಾ ವ್ಯವಸ್ಥೆಯು ನಮ್ಮನ್ನು ತಪ್ಪುದಾರಿಗೆ ತಳ್ಳುತ್ತಿದೆ. ಯಾವುದನ್ನಾದರೂ ಪ್ರಶ್ನಿಸುವ, ತಿದ್ದಿಕೊಳ್ಳುವ ಮನೋಭಾವ ಇಲ್ಲದಂತಾಗಿದೆ, ಇಂತಹ ಆಂಗ್ಲ ಮಾದರಿಯ ಶಿಕ್ಷಣಕ್ಕೆ ಮುಕ್ತಾಯ ಹಾಡಿ, ವಿದ್ಯಾರ್ಥಿಗಳ ಏಳಿಗೆ, ಅಭ್ಯುದಯ ಮತ್ತು ಸರ್ವತೋಮುಖ ಬೆಳವಣಿಗೆಯ ಕಡೆ ಒತ್ತು ಕೊಟ್ಟು, ಶಿಕ್ಷಣ ನೀತಿ ಸುಧಾರಿಸುವಲ್ಲಿ ಶ್ರಮಿಸಬೇಕು ಹಾಗು ನಮ್ಮ ಸಂಸ್ಕೃತಿಯ ಉಳಿವಿಗಾಗಿ ಹೋರಾಡಬೇಕು ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾದ ಪ್ರೊ. ಬಿ. ವಿ. ಸಾಂಬಶಿವಯ್ಯನವರು ಮಾತನಾಡುತ್ತಾ, 19, 20 ಮತ್ತು 21ನೇ ಶತಮಾನದಲ್ಲಿ ಜಾಗತೀಕರಣ ವ್ಯವಸ್ಥೆಯು ಅಭಿವೃದ್ಧಿ ಹೊಂದುತ್ತಿದ್ದು, ನಮ್ಮ ಉನ್ನತ ಶಿಕ್ಷಣ ನೀತಿಯೂ ಸಹ ಬದಲಾಗಬೇಕು. ದೇಶದಲ್ಲಿ ಇಂದು 7 ಲಕ್ಷ ಉಪನ್ಯಾಸಕರು, 700 ವಿಶ್ವವಿದ್ಯಾಲಯಗಳು ಹಾಗೂ 37000 ಕಾಲೇಜುಗಳು ಉನ್ನತ



ಶಿಕ್ಷಣವನ್ನು ನೀಡುತ್ತಿದೆ. ಆದರೆ, ವೃತ್ತಿಪರ ಶಿಕ್ಷಣದ ಕಡೆಗೆ ಕೆಲವು ವಿಶ್ವವಿದ್ಯಾಲಯಗಳು ಒಲವನ್ನು ತೋರುತ್ತಿದೆ. ವಿದ್ಯಾರ್ಥಿಗಳ ಜೀವನ ರೂಪಿಸುವಲ್ಲಿ ವೃತ್ತಿಪರ ಶಿಕ್ಷಣವು ಪ್ರಮುಖ ಪಾತ್ರ ವಹಿಸುತ್ತದೆ. ಈ ನಿಟ್ಟಿನಲ್ಲಿ ನಮ್ಮ ಕಾಲೇಜು ಶ್ರಮಿಸುತ್ತಿದೆ.

ಮುಂದುವರಿದು ಮಾತನಾಡುತ್ತಾ, ಪ್ರಪಂಚದಲ್ಲಿ ನುರಿತ ವೃತ್ತಿಪರ ಅಭಿಶಿಕ್ಷಣ ಕೋರ್ಸ್ ನೀಡುವಲ್ಲಿ ದಕ್ಷಿಣ ಕೋರಿಯಾ 96%, ಜರ್ಮನಿ 70%, ಚೀನಾ 50% ಮುಂದಿದೆ, ಆದರೆ ನಮ್ಮ ದೇಶ ಅತ್ಯಂತ ಕಡಿಮೆ ಎಂದರೆ ಶೇಕಡಾ 2% ಕೌಶಲ್ಯಾಧಾರಿತ ವಿದ್ಯಾರ್ಥಿಗಳನ್ನು ರೂಪಿಸುತ್ತಿದೆ. ಇದಕ್ಕಾಗಿ ಯುಜಿಸಿ ಮತ್ತು ಎಂಹೆಚ್‌ಆರ್‌ಡಿ ವೃತ್ತಿಪರ ಕೌಶಲ್ಯಾಧಾರಿತ ತರಬೇತಿ ಶಿಕ್ಷಣಕ್ಕಾಗಿ ಕೆಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಈ ಯೋಜನೆಗಳ ಅನುಷ್ಠಾನಕ್ಕಾಗಿ ದೇಶದ ಎಲ್ಲಾ ವಿಶ್ವವಿದ್ಯಾಲಯಗಳು ಕೈಜೋಡಿಸಬೇಕೆಂದರು. ಈ ನಿಟ್ಟಿನಲ್ಲಿ ಜೆಎಸ್‌ಎಸ್ ವಿಶ್ವವಿದ್ಯಾನಿಲಯ ತನ್ನದೇ ಕಾರ್ಯಕ್ರಮಗಳನ್ನು ಮತ್ತು ರೂಪುರೇಶೆಯನ್ನು ಹಾಕಿಕೊಂಡು ಆ ದಿಸೆಯಲ್ಲಿ ಮುನ್ನಡೆದಿದೆ ಎಂದರು.

ಆಭಿಶಿಕ್ಷಣ ಕಾರ್ಯಕ್ರಮಕ್ಕೆ ಬಂಜಾರ ಅಕಾಡೆಮಿಯ ಡಾ. ಆಲಿ ಕಾವಾಜ ಅವರ ಜೊತೆಗೂಡಿ, ಡಾ. ಆಶಾಸಿದ್ದಿ, ಶ್ರೀಮತಿ ಪೂರ್ಣಿಮ ಗಣೇಶ್ ಹಾಗೂ ಶ್ರೀಮತಿ ರೀಮಾರವರು ತಮ್ಮ ಉಪನ್ಯಾಸ ನೀಡಿದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ.ಬಿ.ಮಲ್ಲಿಕಾರ್ಜುನ ಪಂಡಿತ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯವ್ಯಕ್ತಿಗಳನ್ನು ಪರಿಚಯಿಸಿ ಸ್ವಾಗತಿಸಿದರು. ಕನ್ನಡ ವಿಭಾಗದ ಶ್ರೀ ಕುಮಾರ್ ಪ್ರಾರ್ಥಿಸಿದರು. ಆಂಗ್ಲ ವಿಭಾಗದ ಮುಖ್ಯಸ್ಥರಾದ ಪ್ರೊ. ಎಚ್. ಎಂ. ಮಹಾಲಿಂಗಪ್ಪ ವಂದನಾರ್ಪಣೆ ಮಾಡಿದರು. ಜೈವಿಕ ತಂತ್ರಜ್ಞಾನ ವಿಭಾಗದ ಮುಖ್ಯಸ್ಥರಾದ ಅಭಿಜಿತ್ ಎಂ. ಸಿಂಗ್ ಕಾರ್ಯಕ್ರಮ ನಿರೂಪಿಸಿದರು. ಸಮಾರಂಭದಲ್ಲಿ 150 ಕ್ಕೂ ಹೆಚ್ಚು ಉಪನ್ಯಾಸಕ ವರ್ಗದವರು ಪಾಲ್ಗೊಂಡು, ಕಾರ್ಯಕ್ರಮದ ಪ್ರಯೋಜನ ಪಡೆದರು.

(ಎಂ.ಬಿ. ಮಲ್ಲಿಕಾರ್ಜುನ ಪಂಡಿತ್)
ಪ್ರಾಂಶುಪಾಲರು

J.S.S. College of Arts, Commerce & Science
Ooty Road, MYSORE

ಗೆ,

ಸಂಪಾದಕರು

______________________

______________________

ಮೈಸೂರು